ಮತ್ತು ಕೆಳಗೆ ಹೋಗುತ್ತಿದ್ದಂತೆ ಚೂಪಾಗುವ ಪ್ಯಾಂಟು ಧರಿಸುತ್ತಿದ್ದುದರಿಂದ, ನಮ್ಮನಮ್ಮೊಳಗೆ ಅವರನ್ನು 'ಮಿಸ್ಟರ್ ಮೂಲಂಗಿ' ಎಂದು ಕರೆದುಕೊಂಡಿದ್ದೆವು. ಅದೇ ಕಾರಣವಾಗಿ, ನನಗೀಗ ಅವರ ನಿಜವಾದ ಹೆಸರು ಮರೆತೇಹೋಗಿದೆ. ಆದರೆ, ಹಾವಭಾವ ಸಮೇತ ಅವರ ಹಲವು ಮಾತುಗಳು ಅಚ್ಚಳಿಯದಂತೆ ಮನಸ್ಸಿನಲ್ಲಿ ದಾಖಲಾಗಿವೆ. ಎರಡು ವರ್ಷಗಳ ಹಿಂದೆ ಮುನಿಸಿಪಾಲಿಟಿಯ ಮುಖ್ಯಸ್ಥ ಹುದ್ದೆಯಿಂದ ನಿವೃತ್ತರಾಗಿದ್ದ ಆ ಮಹನೀಯರು ನಾವು ಬಯಸಿದ್ದಕ್ಕಿಂತ ಹೆಚ್ಚು ಸಹಾಯ ಮಾಡಿದರು – ತಮ್ಮ ಫಿಯೆಟ್ ಕಾರಿನಲ್ಲೇ ನಮ್ಮನ್ನು ಊರಿಂದೂರಿಗೆ ಕರೆದೊಯ್ದು ಪ್ರದರ್ಶನಗಳನ್ನು ತೋರಿಸುತ್ತಿದ್ದರು; ನಮ್ಮ ಜೇಬಿನ ಸ್ಥಿತಿಯನ್ನು ತಾವೇ ಊಹಿಸಿ ಆಗಾಗ ಊಟ ಕೂಡಾ ಹಾಕಿಸುತ್ತಿದ್ದರು. ಸದ್ಯದ ಕಥನಕ್ಕೋಸ್ಕರ ನಾನು ಅವರ ಹೆಸರನ್ನು ಗೋಪಾಲನ್ ಎಂದು ಇಟ್ಟುಕೊಳ್ಳುತ್ತೇನೆ.

ಒಂದು ಮುಸ್ಸಂಜೆ, ಗೋಪಾಲನ್ ನಮ್ಮನ್ನೆಲ್ಲ ತಮ್ಮ ಕಾರಿನಲ್ಲಿ ತುಂಬಿಕೊಂಡು ಸಮೀಪದ ಊರಿನಲ್ಲಿ ನಡೆಯುವ ವಿಶೇಷ ತೆಯ್ಯಮ್ ಉತ್ಸವವೊಂದಕ್ಕೆ ಕರೆದೊಯ್ಯುತ್ತಿದ್ದರು. ತೆಯ್ಯಮ್‌ನ ಪರಿಚಯ ಇಲ್ಲದವರಿಗಾಗಿ ಪ್ರಾಥಮಿಕ ಮಾಹಿತಿ ಹೇಳಿಬಿಡುತ್ತೇನೆ – ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತಿಗೂ ಪ್ರಚಲಿತವಿರುವ ಭೂತಾರಾಧನೆಯ ಕೇರಳದ ಅಣ್ಣ, ಈ ತೆಯ್ಯಮ್. ಇದನ್ನು ರಂಗಭೂಮಿಯೆಂದಾಗಲೀ ಪ್ರದರ್ಶನವೆಂದಾಗಲೀ ಕರೆಯುವುದು ತಪ್ಪು; ಇದು ಊರಿನ ಒಂದು ಆಚರಣೆ; ಧಾರ್ಮಿಕವೋ ಲೌಕಿಕವೋ ಬೇರ್ಪಡಿಸಲಿಕ್ಕಾಗದ ಒಂದು ಪ್ರಸ್ತುತಿ. ಪಾತ್ರಿಯೊಬ್ಬನ ಮೇಲೆ – ಅಥವಾ ನಾವು ನೋಡಿದ ಆ ಊರಲ್ಲಿ ಆದಂತೆ ಹಲವು ಪಾತ್ರಿಗಳ ಮೇಲೆ – ದೆಯ್ಯಗಳು ಆವಾಹನೆಗೊಂಡು ಅವರನ್ನು ಚಿತ್ರವಿಚಿತ್ರ ಆಂಗಿಕಾಭಿನಯದಲ್ಲಿ ಕುಣಿಸುವುದು; ಕಡೆಯ ಭಾಗದಲ್ಲಿ ಅವರಿಂದ ಗ್ರಾಮಸ್ಥರು ನಾನಾ ಬಗೆಯ ಪ್ರಶ್ನೆ ಕೇಳಿ ಪರಿಹಾರ ಪಡೆಯುವುದು – ಇದು ತೆಯ್ಯಮ್ ಆಚರಣೆಯ ಸ್ಥೂಲ ಚೌಕಟ್ಟು. ಕಾರಿನಲ್ಲಿ ಹೋಗುವಾಗ ಗೋಪಾಲನ್ ಉತ್ಸಾಹದಿಂದ ನಮಗೆ ಆ ಆಚರಣೆಯ ಹಿನ್ನೆಲೆಯನ್ನೂ, ಅದರ ವ್ಯಾಪ್ತಿ–ವೈವಿಧ್ಯಗಳನ್ನೂ ವಿವರಿಸುತ್ತಿದ್ದರು; ಮಲಯಾಳಂ ಬಾರದ ನಮಗೆ ಅಲ್ಲಿ ನಡೆಯುವ ಸಂಗತಿ ತಪ್ಪಿಹೋಗಬಾರದೆಂಬ ಎಚ್ಚರದಲ್ಲಿ ಪ್ರತಿಯೊಂದು ಸಂಗತಿಯನ್ನೂ 'ಪಿನ್ನೆ... ಪಿನ್ನೆ...' ಎಂದು ವಿವರಿಸುತ್ತಿದ್ದರೂ, ಆ ಸ್ಥಳೀಯ ಸಂಸ್ಕೃತಿಗಳಲ್ಲಿ ಪ್ರವೇಶವಿಲ್ಲದಿದ್ದ ನಮಗೆ ಗೋಪಾಲನ್ ಅವರ ಮಲಯಾಳಗಂಧೀ ಇಂಗ್ಲಿಷಿನ ವಿವರಣೆಗಳೂ ಅರ್ಧಕ್ಕಿಂತ ಹೆಚ್ಚು ಅರ್ಥವಾಗುತ್ತಿರಲಿಲ್ಲ. ಅದೂ ಗೊತ್ತಿದ್ದ ಅವರು ಎಲ್ಲವನ್ನೂ ಎರಡೆರಡು ಬಾರಿ ಹೇಳುತ್ತಿದ್ದರು!

ಅವತ್ತು ಗೋಪಾಲನ್ ಕಾರು ನಡೆಸುತ್ತಿದ್ದರೆ, ನಾನು ಮುಂದಿನ ಸೀಟಲ್ಲಿ ಕೂತಿದ್ದೆ; ಉಳಿದ ಮೂವರು ಹಿಂದಿನ ಸೀಟಿನಲ್ಲಿದ್ದರು; ಗೋಪಾಲನ್ ಅವರ ಮಾತುಗಳ ಜತೆಜತೆಗೇ ಸಂಜೆಯ ಕತ್ತಲು ಏರತೊಡಗಿತ್ತು; ಹಿಂದಿನಿಂದ ಬರುತ್ತಿದ್ದ ವಾಹನಗಳ ಬೆಳಕು ಕಾರಿನ ಕನ್ನಡಿಗಳಲ್ಲಿ ಪ್ರತಿಫಲಿಸಿ ನಮ್ಮ ಮುಖವನ್ನು ಹೊಳೆಸುತ್ತಿತ್ತು. ಗೋಪಾಲನ್ ಮಾತ್ರ ಅನುನಾಸಿಕಗಳೇ ತುಂಬಿರುವ ಮಲಯಾಳಿ ದನಿಯಲ್ಲಿ ತಮ್ಮ ವಿವರಣೆ ನಡೆಸುತ್ತ, ತೆಯ್ಯಮ್‌ನಲ್ಲಿ ಬರುವ ದೆಯ್ಯಗಳಿಗೂ ನಾವು ದೇವಾಲಯಗಳಲ್ಲಿ ನೋಡುವ ದೇವರಿಗೂ ನಡುವೆ ಏನೆಲ್ಲ ವ್ಯತ್ಯಾಸಗಳಿವೆ ಎಂಬುದನ್ನು ವಿವರಿಸುತ್ತಿದ್ದರು. ಮಾತ್ರವಲ್ಲ, ತೆಯ್ಯಮ್‌ನ ಒಂದೊಂದು ದೆಯ್ಯವೂ ಹೇಗೆ ಬೇರೆಬೇರೆ ಎಂಬುದನ್ನೂ ಮತ್ತು ಹಾಗಿರುವುದರಿಂದ ಪ್ರತಿಯೊಂದು ತೆಯ್ಯಮ್ ಪಾತ್ರಿಯೂ ಆ ವಿಭಿನ್ನ ದೆಯ್ಯಗಳನ್ನು ಎಂಥೆಂಥ ವಿಭಿನ್ನ ಮಾದರಿಗಳಲ್ಲಿ ಆವಾಹಿಸಿಕೊಳ್ಳುತ್ತಾನೆ ಎಂಬುದನ್ನೂ ಉದಾಹರಣೆಗಳ ಸಮೇತ ಹೇಳುತ್ತ ಸಾಗಿದ್ದರು. ಹಾವಭಾವಸಮೇತವಾದ ಮಾತು ಕಿವಿಯ ಮೇಲೆ ಬೀಳುತ್ತಿದ್ದರೂ ಹಿಂದಿನ ರಾತ್ರಿ ನಿದ್ದೆಗೆಟ್ಟಿದ್ದರಿಂದ ಆ ಸಂಜೆಗತ್ತಲು ನನ್ನ ಕಣ್ಣುಗಳನ್ನು ಬಾಡಿಸಲಾರಂಭಿಸಿತ್ತು. ಇನ್ನೇನು ಜೊಂಪು ಹತ್ತಬೇಕು – ಆಗ,